# ಪ್ರಹಸನ ಪ್ರಸಂಗ

ಕೇವಲ ವಿದ್ವತ್ಪೂರ್ಣವಾಗಿ ಮಾತನಾಡುವುದೇ ವಿದ್ವತ್ತಿನ ದ್ಯೋತಕವಲ್ಲ. ಅನೇಕರು ಇತರರ ಭಾವನೆಗಳನ್ನು ಸಂಗ್ರಹಿಸಿ ಪಾಂಡಿತ್ಯಪೂರ್ಣವಾದ ಉಪನ್ಯಾಸ ನೀಡುತ್ತಾರೆ. ಆದರೆ ಅವರನ್ನು ಸ್ವಲ್ಪ ಕೆದಕಿದಾಗ ಅವರ ನಿಜರೂಪ ಹೊರಬರುತ್ತದೆ. ಹಾಗೆಯೆ ಅನೇಕರು ಧಾರ್ಮಿಕತೆಯನ್ನು ಪ್ರದರ್ಶಿಸುತ್ತಾರೆ. ಆದರೆ ಅಂತರ್ಯದಲ್ಲಿ ಅನುಭವಶೂನ್ಯರಾಗಿರುತ್ತಾರೆ.

ಒಬ್ಬ ಪ್ರಸಿದ್ಧ ವಿಜ್ಞಾನಿಯಿದ್ದ. ಅವನು ಉತ್ತಮ ವಾಗ್ಮಿಯೂ ಆಗಿದ್ದ. ಅವನು ಅನೇಕ ಕಡೆಗಳಲ್ಲಿ ಉಪನ್ಯಾಸ ನೀಡುತ್ತಿದ್ದನು. ಒಂದು ದಿನ ಅವನ ವಾಹನಚಾಲಕನು ಅವನಿಗೆ ಹೇಳಿದ : "ನೋಡಿ, ನಾನು ನಿಮ್ಮ ಉಪನ್ಯಾಸವನ್ನು ಅನೇಕ ಬಾರಿ ಕೇಳಿದ್ದೇನೆ. ನಾನೂ ಈಗ ನಿಮ್ಮಂತೆಯೇ ಉಪನ್ಯಾಸ ಮಾಡಬಲ್ಲೆ."

ವಿಜ್ಞಾನಿಯು ಹೇಳಿದ : "ಬಹಳ ಒಳ್ಳೆಯದು. ಈ ದಿನ ನೀನೇ ಉಪನ್ಯಾಸ ಮಾಡಿಬಿಡು. ನಾನು ಕುಳಿತು ಕೇಳುತ್ತೇನೆ."

ಇಬ್ಬರೂ ಸಭಾಭವನವನ್ನು ಪ್ರವೇಶಿಸಿದರು. ವಿಜ್ಞಾನಿಯು ಚಾಲಕನ ಹ್ಯಾಟನ್ನು ಹಾಕಿಕೊಂಡು ಶ್ರೋತೃಗಳ ನಡುವೆ ಕೊನೆಯ ಸಾಲಿನಲ್ಲಿ ಕುಳಿತನು. ಚಾಲಕನು ವೇದಿಕೆಯ ಮೇಲೆ ಹೋಗಿ ಭಾಷಣ ಪ್ರಾರಂಭಿಸಿದನು.

ಭಾಷಣ ಭೂಷಣವಾಗಿಯೇ ಇತ್ತು. ಶ್ರೋತೃಗಳೆಲ್ಲ ತಲೆದೂಗಿದರು. ಕೊನೆಯಲ್ಲಿ "ಏನಾದರೂ ಪ್ರಶ್ನೆಗಳಿವೆಯೇ?" ಎಂದು ಹೆಮ್ಮೆಯಿಂದ ಕೇಳಿದನು.

"ಹೌದು" ಎಂದು ಹೇಳಿ ಒಬ್ಬ ಪ್ರೊಫೆಸರ್ ಒಂದು ಅತ್ಯಂತ ತಾಂತ್ರಿಕವಾದ ಪ್ರಶ್ನೆಯನ್ನು ಕೇಳಿದನು.

ಚಾಲಕನು ತಬ್ಬಿಬ್ಬಾದ. ಆದರೆ ಕೂಡಲೆ ಸುಧಾರಿಸಿಕೊಂಡು ಹೇಳಿದನು: "ಇದೇನು, ಬಹಳ ಸುಲಭ, ಹಿಂದೆ ಕುಳಿತಿರುವ ನನ್ನ ವಾಹನ ಚಾಲಕನು ಉತ್ತರಿಸುತ್ತಾನೆ."

❀ ❀ ❀

ಒಂದು ಒಂಟೆಯ ಮರಿ ತನ್ನ ತಂದೆಯನ್ನು ಕೇಳುತ್ತದೆ: "ನಮ್ಮ ಬೆನ್ನು ಇಷ್ಟೊಂದು ಗೂನಾಗಿರುವುದಕ್ಕೆ ಕಾರಣವೇನು?"

"ನೋಡು, ಮರಿ, ನಾವು ಮರಳುಗಾಡಿನಲ್ಲಿ ಬಹುದೂರ ಪ್ರಯಾಣ ಮಾಡಬೇಕು. ಅಲ್ಲಿ ಆಹಾರ ಸಿಕ್ಕುವುದೇ ಇಲ್ಲ. ಈ ಗೂನುಬೆನ್ನಿರುವುದು ಆಹಾರವನ್ನು ಶೇಖರಿಸಿಟ್ಟುಕೊಳ್ಳುವುದಕ್ಕೆ." ಎಂದು ತಂದೆ ಮಗುವಿಗೆ ಹೇಳಿದ. ಅವನು ಎಷ್ಟಾದರೂ ಉಷ್ಟ್ರ ಪಾಂಡಿತ್ಯ ಉಳ್ಳವನು ತಾನೆ.

ಮರಿ ಒಂಟೆ ಮತ್ತೆ ಪ್ರಶ್ನೆ ಮಾಡಿತು : "ನಮಗೆ ಇಷ್ಟು ಉದ್ದನೆಯ ರೆಪ್ಪೆಗೂದಲುಗಳಿವೆಯಲ್ಲ, ಅದು ಏತಕ್ಕೆ?"

ತಂದೆಯ ಉತ್ತರ: "ಮರಳಿನ ಕಣಗಳು ಕಣ್ಣಿನ ಒಳಗೆ ಹೋಗದಿರಲಿ ಎಂದು."

ಮರಿ ಒಂಟೆಗೆ ಇನ್ನೂ ಕುತೂಹಲ ಕಡಮೆಯಾಗಲಿಲ್ಲ. ಅದು ಬಹುಶಃ ತಂದೆಯ ತಾಳ್ಮೆಯನ್ನು ಪರೀಕ್ಷಿಸುತ್ತಿತ್ತು. ಅದು ಕೇಳಿತು :"ಅಪ್ಪ, ಅದೆಲ್ಲ ಸರಿ, ನಮ್ಮ ಕಾಲ್ಬೆರಳುಗಳ ನಡುವೆ ಈ ಚರ್ಮದ ಪರೆ ಇದೆಯಲ್ಲ. ಇದಕ್ಕೆ ಕಾರಣವೇನು?"

ತಂದೆ ತಾಳ್ಮೆಯಿಂದಲೇ ಉತ್ತರಿಸಿದ, ಸುಮ್ಮನೆ ಬಾಯಿ ಮುಚ್ಚಿಕೊಂಡಿರು ಎಂದು ಮಾನವಮಾರ್ಗವನ್ನು ಅನುಸರಿಸಲಿಲ್ಲ. ಅವನು ಹೇಳಿದ: "ನಮ್ಮ ಕಾಲು ಮರಳಿನಲ್ಲಿ ಹೂತುಹೋಗದಿರಲಿ ಎಂದು ಆ ರೀತಿ ಪರೆ ದೇವರು ಇಟ್ಟಿದ್ದಾನೆ. ಅರ್ಥವಾಯಿತೇನಪ್ಪ?"

ಆಗ ಕೂಡಲೆ ಒಂಟೆಮರಿ ಕೇಳಿತು : "ಅಪ್ಪ, ಹಾಗಾದರೆ ನಾವಿಲ್ಲಿ ಲಂಡನ್ನಿನ ಮೃಗಾಲಯದಲ್ಲಿ ಇರುವುದಾದರೂ ಏತಕ್ಕೆ?"

ಮರಳುಗಾಡಿನಲ್ಲಿ ಇರಬೇಕಾದ, ಅದಕ್ಕೆ ಹೊಂದಿಕೆಯಾಗುವಂತೆ ದೇಹರಚನೆಯುಳ್ಳ ಒಂಟೆಗಳನ್ನು ಮೃಗಾಲಯದಲ್ಲಿ ಬಂಧಿಸಿಡುವಂತೆ ನಾವೂ ಉನ್ನತಸ್ತರದಲ್ಲಿರಬೇಕಾದ ಆಧ್ಯಾತ್ಮಿಕ ಆದರ್ಶವನ್ನು ನಮ್ಮ ಪ್ರಾಪಂಚಿಕ ಮಟ್ಟಕ್ಕೆ ಎಳೆದು ತರುತ್ತೇವೆ. ನಾವು ಆ ಮಟ್ಟಕ್ಕೆ ಏರುವ ಬದಲು ಅದನ್ನೇ ನಮ್ಮ ಮಟ್ಟಕ್ಕೆ ಇಳಿಸುತ್ತೇವೆ. ಹೀಗೆ ನಮ್ಮ ಆಧ್ಯಾತ್ಮಿಕ ಆದರ್ಶ ಡೈಲ್ಯೂಟ್ ಆಗಿಬಿಡುತ್ತದೆ.

❀ ❀ ❀

ಲಾಯರೊಬ್ಬರು ಪ್ರಸಿದ್ಧ ಟೆನ್ನಿಸ್ ಆಟಗಾರ್ತಿಯನ್ನು ಮದುವೆಯಾದರು. ಈಗ ಅವಳೊಂದು "ಕೋರ್ಟ್"ನಲ್ಲಿದ್ದಾಳೆ, ಇವರೊಂದು "ಕೋರ್ಟ್"ನಲ್ಲಿದ್ದಾರೆ!

❀ ❀ ❀

"ಮುಂದಿನ ಮೀಟಿಂಗನ್ನು ಯಾವಾಗ ನಡೆಸಬೇಕೆಂದು ನಿರ್ಧರಿಸಲು ಸೇರುವ ಮೀಟಿಂಗೇ ಕಾನ್ಫರೆನ್ಸ್!"

❀ ❀ ❀

"ಕಾನ್ಫರೆನ್ಸ್ ಎಂದರೆ ವೈಯಕ್ತಿಕವಾಗಿ ಏನೂ ಮಾಡಲಾಗದ ಪ್ರಮುಖ ವ್ಯಕ್ತಿಗಳು ಸೇರಿ ಏನನ್ನೂ ಮಾಡಲಾಗುವುದಿಲ್ಲವೆಂದು ಒಟ್ಟಿಗೆ ನಿರ್ಣಯಕ್ಕೆ ಬರುವ ಸಭೆ!"